ಪಿ.ಡಬ್ಲ್ಯೂ: 01.

ದಿನಾಂಕಃ 27-10-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಎಂ.ಎನ್ ವಕೀಲರಿಂದಃ</u>

ನನ್ನ ತಾತ ಬೋರೇಗೌಡರಿಗೆ ಎಷ್ಟು ಎಕರೆ ಜಮೀನು ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಅವುಗಳೆಂದರೆ ಆರ್ ಟಿ ಸಿ ಹಾಜರುಪಡಿಸಿದ್ದೇನೆ. ನನ್ನ ತಾತನ ಹೆಸರಿನಲ್ಲಿ ಇಷ್ಟು ಎಕರೆ ಜಮೀನು ಇತ್ತು ಎಂದು ತೋರಿಸುವ ಯಾವುದೇ ದಾಖಲೆ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ. ದಾವಾ ಸ್ವತ್ತಿನಲ್ಲಿ ನಾನೇ ಉಳುಮೆ ಮಾಡುತಿತದ್ದೇನೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ. ಅವುಗಳೆಂದರೆ ಆರ್ ಟಿ ಸಿ ಮತ್ತು ಎಲ್ಲವನ್ನೂ ಕೊಟ್ಟಿದ್ದೇನೆ ಎಂದಿದ್ದಾರೆ. ನಾನು ದಾವಾ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿರುವ ಬಗ್ಗೆ ಕೃಷಿ ಇಲಾಖೆಯಲ್ಲಿ ಸಾಲ ಪಡೆದಿರುವ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದಿದ್ದಾರೆ. ನೀವು ದಾವಾ ಸ್ವತ್ತಿನಲ್ಲಿ ಯಾವತ್ತಿಗೂ ಸ್ವಾಧೀನಲ್ಲಿ ಇಲ್ಲ ಮತ್ತು ಅದಕ್ಕೆ ಪೂರಕವಾಗಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ. ದಾವಾ ಸ್ವತ್ತಿನ ದಕ್ಷಿಣಕ್ಕೆ ಯಾರಿದ್ದಾರೆಂದು ನನಗೆ ಗೊತ್ತಿಲ್ಲಾ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ ಇದೆ. ಪಶ್ಚಿಮಕ್ಕೆ ಕೆಂಗೇಗೌಡರ ಜಮೀನು ಇದೆ. ಪ್ರತಿವಾದಿ ಏನು ವಿದ್ಯಾಭ್ಯಾಸ ಮಾಡಿದ್ದಾರೆಂದು ನನಗೆ ಗೊತ್ತಿಲ್ಲಾ. ಪ್ರತಿವಾದಿಗೆ ಓದು ಬರಹ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲಾ. ಈ ದಾವೆ ಹಾಕುವ ಪೂರ್ವದಲ್ಲಿ ನಾನು ಮತ್ತು ಪ್ರತಿವಾದಿ ಅನ್ಯೋನ್ಯವಾಗಿದ್ದೇವು ಎಂದರೆ ಸರಿ . ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಸಣ್ಣಪುಟ್ಟ ಕೆಲಸಗಳಿಗೆ ತಾಲ್ಲೂಕು ಕಚೇರಿಗಳಲ್ಲಿ ಅವರ ಪರವಾಗಿ ನಾನೇ ಮಾಡಿಕೊಡುತ್ತಿದ್ದೆ ಎಂದರೆ ಸರಿಯಲ್ಲಾ.

ಹುಣಸೂರಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆರ್ ಎ 45/2014 ದಾಖಲ್ಲಾಗಿದ್ದು , ಅದರಲ್ಲಿ ನಾನು ಕೂಡಾ ಪಕ್ಷಕಾರನಾಗಿದ್ದು, ಅದರ ಬಗ್ಗೆ ಸಂಪೂರ್ಣವಾದ ಮಾಹಿತಿ ಇದೆ ಎಂದರೆ ನನಗೆ ಗೊತ್ತಿಲ್ಲಾ ಎಂದಿದ್ದಾರೆ. ಸದರಿ ಆರ್ ಎ 45/2014 ರ ವಕಾಲತ್ ನಾಮಾ ಮತ್ತು ಇತರೆ ದಾಖಲಾತಿಗಳಿಗೆ ನಾನು ಸಹಿ ಮಾಡಿರುವುದಿಲ್ಲ. ಆ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಮ್ಮ ಅಣ್ಣನವರಿಗೆ ಸದರಿ ಕೇಸಿನ ವಿಚಾರ ಗೊತ್ತು. ಶ್ರೀಮತಿ ಸಿಂಧು ನನಗೆ ಗೊತ್ತಿಲ್ಲಾ. ನಾವುಗಳು , ಶ್ರೀಮತಿ ಸಿಂಧುರವರು ಸೇರಿಕೊಂಡು , ಪ್ರತಿವಾದಿಗೆ ಸೇರಿದಂತಹ ಜಮೀನನ್ನು ಅಕ್ರಮವಾಗಿ ಮಾರಿಸಿದ್ದೀರಿ ಎಂದರೆ ಸರಿಯಲ್ಲಾ ಪ್ರತಿವಾದಿಯ ಜೊತೆ ಅನ್ಯೋನ್ಯವಾಗಿದ್ದಾಗ ಬೆಳೆ ಸಾಲ ತೆಗೆದುಕೊಳ್ಳುತ್ತೇನೆಂದು ಹೇಳಿ, ಪ್ರತಿವಾದಿಯ ಮುಗ್ಧತೆಯನ್ನ ಅರಿತು , ಖಾಲಿ ಪತ್ರಗಳ

ಮೇಲೆ ಸಹಿ ಪಡೆದಿದ್ದೇವೆಂದರೆ ಸರಿಯಲ್ಲಾ. ಅದರ ವಿಚಾರ ಪ್ರತಿವಾದಿಗೆ ಗೊತ್ತಾಗಿ , ಅದರ ಬಗ್ಗೆ ವಿಚಾರಿಸಲಾಗಿ ನಾವುಗಳು ಕರಾರಿನ ಕ್ರಯ ಪತ್ರಕ್ಕೆ ಸಾಕ್ಷಿಧಾರರಾಗಿ ಸಹಿಗಳನ್ನು ಮಾಡಿದ್ದೇವೆಂದರೆ ಸರಿಯಲ್ಲಾ. ದಿಃ 27-08-2014 ರಂದು ಪ್ರಸ್ತುತ ದಾವೆ ವಿಚಾರಣೆಗೊಂಡು ಏಕಪಕ್ಷೀಯ ತೀರ್ಪು ಆಗಿರುವ ವಿಚಾರ ನನಗೆ ಗೊತ್ತು. ನ್ಯಾಯಾಲಯದಿಂದ ನನಗೆ ಯಾವುದೇ ಸಮನ್ಸ್ ಬಂದಿಲ್ಲ. ನ್ಯಾಯಾಲಯಕ್ಕೆ ಬರಲು ನಮ್ಮ ಅಣ್ಣನವರು ತಿಳಿಸಿದ್ದಾರೆ. ನನ್ನ ಅಣ್ಣ ನ್ಯಾಯಾಲಯಕ್ಕೆ ಬಂದಾಗ ಸದರಿ ವಿಚಾರ ಗೊತ್ತಾಯಿತು.

ಈ ಕೇಸಿನ ವಿದ್ಯಮಾನಗಳು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲಾ. ಈ ಕೇಸಿನ ವಿದ್ಯಮಾನಗಳ ಬಗ್ಗೆ ಅಲ್ಪಸಲ್ಪ ಗೊತ್ತು. ಸಂಪೂರ್ಣವಾಗಿ ನನಗೆ ಗೊತ್ತಿಲ್ಲಾ. ದಿಃ07-10-2014 ರಂದು ಈ ದಾವೆಯ ತೀರ್ಪು ಆದ ನಂತರ ಶ್ರೀಮತಿ ಸಿಂಧು ಎನ್ನುವವರಿಗೆ ತಾವುಗಳೆಲ್ಲವೂ ಪ್ರತಿವಾದಿಗೆ ಸೇರಿದ ಜಮೀನನ್ನು ಪ್ರತಿವಾದಿಗೆ ಮಾಲೀಕರು ಎಂದು ತಿಳಿಸಿ ಅಕ್ರಮವಾಗಿ ಮಾರಾಟ ಮಾಡಿದ್ದೀರಿ ಎಂದರೆ ಸರಿಯಲ್ಲಾ. ಸದರಿ ವಿಚಾರವಾಗಿ ಶ್ರೀ ಮತಿ ಸಿಂಧುರವರು ಲಿಖಿತ ನೋಟೀಸು ಕೊಟ್ಟಿದ್ದು, ನಾವು ಅದಕ್ಕೆ ಲಿಖಿತ ಉತ್ತರ ಕೊಟ್ಟಿದೇವೆ ಎಂದರೆ ಸರಿಯಲ್ಲಾ. ಸದರಿ ಜವಾಬ ನೋಟೀಸಿನಲ್ಲಿ ನಾವು ಕ್ರಯದ ಕರಾರು ಪತ್ರಕ್ಕೆ ಸಾಕ್ಷಿಧಾರರಾಗಿ ಸಹಿ ಮಾಡಿದ್ದೇವೆಂದು ಒಪ್ಪಿಕೊಂಡಿದ್ದೇವೆಂದರೆ ಸಾಕ್ಷಿಯು ಗೊತ್ತಿಲ್ಲಾ ಎಂದಿದ್ದಾರೆ. ಸದರಿ ವಿಚಾರವಾಗಿ ನಿಮ್ಮ ವಕೀಲರಿಗೆ ನೀವು ಮಾಹಿತಿ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ನಮ್ಮ ಅಣ್ಣನಿಗೆ ವಹಿಸಿದ್ದೇವೆ ಎಂದಿದ್ದಾರೆ. ನನ್ನ ಅಣ್ಣ ನನ್ನ ಜೊತೆ ಅನ್ಯೋನ್ಯವಾಗಿದ್ದಾರೆ. ಅವರನ್ನು ಕರೆದುಕೊಂಡು ಬಂದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಸಲು ನನಗೇನು ತೊಂದರೆ ಇಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲಾ. ಬಹಳ ವರ್ಷಗಳ ಹಿಂದೆ ಹೇಳಿಕೆ ಆಧಾರದ ಮೇಲೆ ಖಾತೆ ಮಾಡುತ್ತಿದ್ದರು ಎನ್ನುವ ವಿಚಾರ ನಿಮಗೆ ಗೊತ್ತಿದ್ದು , ನೀವು ತಿಳಿದುಕೊಂಡಿದ್ದೀರಿ ಎಂದರೆ ಸರಿ. ದಾವಾ ಸ್ವತ್ತಿನ ಖಾತೆಯನ್ನು ನಿಮ್ಮ ಅಣ್ಣ, ತಂದೆ ಪ್ರತಿವಾದಿಯ ಹೆಸರಿಗೆ ಹೇಳಿಕೆ ಆಧಾರದ ಮೇಲೆ ಖಾತೆ ಮಾಡಿಸಿದ್ದಾರೆಂದರೆ ಸರಿಯಲ್ಲಾ. ಯಾವುದೇ ಪತ್ರಕ್ಕೆ ನಾನು ಸಹಿ ಮಾಡುವ ಮೊದಲು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೀರಿ ಎಂದರೆ ಸಾಕ್ಷಿಯು ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದಿದ್ದಾರೆ. ಸದರಿ ದಾಖಲಾತಿಗಳಲ್ಲಿ ಇರುವ ವಿಚಾರಗಳನ್ನು ಬೇರೆಯವರ ಕಡೆಯಿಂದ ಓದಿ ತಿಳಿದುಕೊಂಡು ಸಹಿ ಮಾಡುತ್ತೀರಿ ಎಂದರೆ ಸರಿ . ನ್ಯಾಯಾಲಯಕ್ಕೆ ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ತಿಳಿದುಕೊಂಡು ಆಮೇಲೆ ಸಹಿ ಮಾಡಿರುತ್ತೇನೆ. ಪ್ರಸ್ತುತ ವಿದ್ಯಮಾನಗಳು ನಿಮಗೆ ಗೊತ್ತು ಎಂದರೆ ಸಾಕ್ಷಿಯು ಸ್ವಲ್ಪ ಗೊತ್ತು

ಎಂದಿದ್ದಾರೆ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ, ಸ್ವಲ್ಪ ಗೊತ್ತಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲಾ. ದಾವಾ ಸ್ವತ್ತಿನ ದಾಖಲಾತಿಗಳು ನಿಮ್ಮ ಪೂರ್ವಜರ ಹೆಸರಿನಲ್ಲಿ ಇಲ್ಲದಿರುವ ಕಾರಣ ನಿಮಗೆ ಯಾವುದೆ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲಾ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ ದಾವಾ ಸ್ವತ್ತಿನ ಮಾಲೀಕರು ಪ್ರತಿವಾದಿ ಎಂದರೆ ಸರಿಯಲ್ಲಾ. ನೀವೇ ಸಂಪೂರ್ಣ ಮಾಲೀಕರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ ಎಂದಿದ್ದಾರೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೇನು ತೊಂದರೆ ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.